ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ಇಲಾಖೆ

# ನಲಿಕಲಿ

## ಅಭ್ಯಾಸ ಸಹಿತ ಪಠ್ಯಪುಸ್ತಕ

# ಆರೋಗ್ಯ ಮತ್ತು ಪರಿಸರ

ಭಾಗ – ೨

@KTBS NOT TO BE REPUBLISHED

2

ಎರಡನೇ ತರಗತಿ

ಸಮಗ್ರ ಶಿಕ್ಷಣ, ಕರ್ನಾಟಕ
ನೃಪತುಂಗ ರಸ್ತೆ
ಬೆಂಗಳೂರು – 560 001

ಕರ್ನಾಟಕ ಪಠ್ಯಪುಸ್ತಕ ಸಂಘ
6ನೇ ಅಡ್ಡರಸ್ತೆ, ಮಲ್ಲೇಶ್ವರಂ
ಬೆಂಗಳೂರು – 560 003

# ನನ್ನ ಕಲಿಕೆಯ ವಿಷಯಗಳು


| ಮೈಲುಗಲ್ಲು | ಶೀರ್ಷಿಕೆ | ಚಟುವಟಿಕೆ ಸಂಖ್ಯೆ | ಪುಟ ಸಂಖ್ಯೆ |
|---|---|---|---|
| 5 | ಆಟಗಳ ನಿಯಮಗಳು | 5.1–5.5 | 1–5 |
| 6 | ನಮ್ಮ ಸುರಕ್ಷತೆ | 6.1–6.6 | 6–11 |
| 7 | ವೃತ್ತಿಗಳು | 7.1–7.7 | 12–18 |
| 8 | ನನ್ನ ಸಾಮರ್ಥ್ಯ | 8.1–8.9 | 19–27 |
| 9 | ಭಾವನೆ – ಭಿನ್ನತೆ | 9.1–9.6 | 28–33 |
| **10** | ನನ್ನ ಕರ್ತವ್ಯ | 10.1–10.7 | 34–40 |
| * | ಮೌಲ್ಯಾಂಕನ–ಸೂಚಿತ ಕಲಿಕಾ ಫಲಗಳು | – | 41 |


@KTBS NOT TO BE REPUBLISHED

5

# 5.1 ತರತರಹದ ಆಟ–ಪಾಠ

2

**ಸೂಚನೆ :** ಚಿತ್ರ ಗಮನಿಸಿ, ಆಟಗಳನ್ನು ಹೆಸರಿಸೋಣ.



1) ಚಿತ್ರದಲ್ಲಿ ಮಕ್ಕಳು ಯಾವ ಯಾವ ಆಟವನ್ನು ಆಡುತ್ತಿದ್ದಾರೆ? ಈ ಆಟಗಳನ್ನು ನೀನು ಆಡಿರುವೆಯಾ?
2) ನೀನು ಯಾವೆಲ್ಲಾ ಆಟಗಳನ್ನು ಆಡಿರುವೆ? ಯೋಚಿಸಿ ಹೇಳು.
3) ನೀನು ಇಷ್ಟಪಡುವ ಯಾವುದಾದರೊಂದು ಆಟದ ಬಗ್ಗೆ ವಿವರಿಸು.

**ಹೀಗೆ ಮಾಡು :**

(ಮನೆಯಲ್ಲಿನ ಹಿರಿಯರು ತಮ್ಮ ಬಾಲ್ಯದಲ್ಲಿ ಯಾವೆಲ್ಲಾ ಆಟಗಳನ್ನು ಆಡುತ್ತಿದ್ದರು ಎಂದು ಕೇಳಿ ತಿಳಿದುಕೊ. ಮಾಹಿತಿಯನ್ನು ಸಂಗ್ರಹಿಸಿ ತರಗತಿಯಲ್ಲಿ ಹಂಚಿಕೊ.)

| | |
|---|---|
| * ನನಗೆ ಅರ್ಥವಾಗಿದೆ | |
| * ನನಗೆ ಸಹಾಯ ಬೇಕಿದೆ | |

ಶಿಕ್ಷಕರ ಸಹಿ :

ದಿನಾಂಕ :

5

## 5.2 ಆಟಗಳ ಸೂಚನೆ – ಪಾಲನೆ

2

**ಸೂಚನೆ :** ಈ ಆಟಗಳನ್ನು ಗಮನಿಸಿ, ಇವುಗಳ ನಿಯಮ ತಿಳಿದು, ನಾವೂ ಆಟ ಆಡೋಣ.



1) ಈ ಆಟದ ಹೆಸರೇನು?

2) ಈ ಆಟಕ್ಕೆ ಬೇಕಾಗುವ ಸಾಮಗ್ರಿಗಳು ಯಾವುವು?

3) ಈ ಆಟದ ನಿಯಮಗಳನ್ನು ವಿವರಿಸು.

1) ಚೌಕಬಾರ ಆಟವನ್ನು ಆಡಿರುವೆಯಾ?

2) ಎಷ್ಟು ಜನ ಸೇರಿ ಈ ಆಟವನ್ನು ಆಡಬಹುದು?

3) ಈ ಆಟ ಗೆಲ್ಲಲು ನಿಯಮಗಳು ಇವೆಯೇ?




@KTBS
NOT TO BE REPUBLISHED

| | |
|---|---|
| * ನನಗೆ ಅರ್ಥವಾಗಿದೆ | ☐ |
| * ನನಗೆ ಸಹಾಯ ಬೇಕಿದೆ | ☐ |

ಶಿಕ್ಷಕರ ಸಹಿ :
ದಿನಾಂಕ :

5

## 5.3 ಆಟಕ್ಕುಂಟು ನಿಯಮಗಳು

3

**ಸೂಚನೆ :** ಖೋ ಖೋ ಆಟದ ನಿಯಮಗಳನ್ನು ಶಿಕ್ಷಕರ ಸಹಾಯದಿಂದ ತಿಳಿಯೋಣ.



**ಹೀಗೆ ಮಾಡು :**

**ನಿಯಮ ತಿಳಿದು ಆಟ ಆಡಿದ ನಂತರ ಈ ಪ್ರಶ್ನೆಗಳಿಗೆ ಉತ್ತರಿಸು.**

- ಖೋ ಖೋ ಆಟ ಆಡಲು ಒಂದು ತಂಡಕ್ಕೆ ಬೇಕಿರುವ ಆಟಗಾರರ ಸಂಖ್ಯೆ ____________
- ಖೋ ಖೋ ಆಟಕ್ಕೆ ಬೇಕಾದ ಕಂಬಗಳ ಸಂಖ್ಯೆ ____________ .
- ಒಂದು ಸಮಯದಲ್ಲಿ ತಪ್ಪಿಸಿಕೊಳ್ಳುವ ಆಟಗಾರರ ಗರಿಷ್ಠ ಸಂಖ್ಯೆ ____________ .
- ಯಾವ ಯಾವ ಸ್ನೇಹಿತರೊಂದಿಗೆ ಈ ಆಟವನ್ನು ಆಡುವೆ? ಅವರ ಹೆಸರುಗಳನ್ನು ಬರೆ ____________, ____________, ____________, ____________, ____________, ____________, ____________, ____________, ____________, ____________

© KTBS NOT TO BE REPUBLISHED

# 5.4 ತಾಳಬದ್ಧ – ಲಯಬದ್ಧ ಆಟಗಳು



**ಸೂಚನೆ :** ಈ ರೀತಿಯ ಆಟಗಳ ಬಗ್ಗೆಯೂ ಅಭ್ಯಾಸ ಮಾಡೋಣ.









- ಗೆಳೆಯರೊಂದಿಗೆ ಸೇರಿ ತಾಳಬದ್ಧವಾಗಿ ಆಟವಾಡುವುದನ್ನು ಅಭ್ಯಾಸ ಮಾಡಿಕೊಳ್ಳಿ.
- ಚಿತ್ರದಲ್ಲಿ ತೋರಿಸಿರುವ ಆಟಗಳಲ್ಲಿ ಯಾವುದಾದರೊಂದು ಆಟವನ್ನು ಅಭ್ಯಾಸ ಮಾಡಿ.
- ಸ್ನೇಹಿತರೆಲ್ಲಾ ಸೇರಿ ತಾಳಬದ್ಧ ಆಟವನ್ನು ಶಾಲಾ ಮೈದಾನದಲ್ಲಿ ಸಾಮೂಹಿಕವಾಗಿ ಪ್ರದರ್ಶಿಸಿ.

| | |
|---|---|
| * ನನಗೆ ಅರ್ಥವಾಗಿದೆ | |
| * ನನಗೆ ಸಹಾಯ ಬೇಕಿದೆ | |

ಶಿಕ್ಷಕರ ಸಹಿ :
ದಿನಾಂಕ :

5

## 5.5 ನೋಡು – ಎಣಿಸು – ಬರೆ

3

**ಸೂಚನೆ :** ಇಲ್ಲಿರುವ ಚಿತ್ರಗಳನ್ನು ಎಣಿಸಿ ಸಂಖ್ಯೆಯಲ್ಲಿ ಬರೆಯೋಣ.



©KTBS
NOT TO BE REPUBLISHED

1. ಚಿತ್ರದಲ್ಲಿ ಹಾರಾಡುತ್ತಿರುವ ಪಕ್ಷಿಗಳ ಸಂಖ್ಯೆ ____________
2. ಮಾವಿನ ಹಣ್ಣುಗಳ ಸಂಖ್ಯೆ ____________
3. ಒಟ್ಟು ಮರಗಳ ಸಂಖ್ಯೆ ____________
4. ಹೂವುಗಳ ಸಂಖ್ಯೆ ____________
5. ಬಲೂನುಗಳ ಸಂಖ್ಯೆ ____________
6. ಕೋಳಿ ಮತ್ತು ಮರಿಗಳ ಸಂಖ್ಯೆ ____________
7. ಬೆಕ್ಕುಗಳ ಸಂಖ್ಯೆ ____________

### ಹೀಗೆ ಮಾಡು:

ನಿನ್ನ ಮನೆಯ ಸುತ್ತಲೂ ಇರುವ ಗಿಡ, ಮರ, ಬಳ್ಳಿ, ಪ್ರಾಣಿ, ಪಕ್ಷಿ, ಮನೆ, ಅಂಗಡಿ, ಬೀದಿ ದೀಪ, ನಲ್ಲಿ ಇತ್ಯಾದಿಗಳನ್ನು ಎಣಿಸಿ ನೋಟ್‌ಬುಕ್‌ನಲ್ಲಿ ಬರೆ.

6

## 6.1 ಚಿತ್ರ ನೋಡು–ಮಾತನಾಡು

2

**ಸೂಚನೆ :** ಚಿತ್ರಗಳನ್ನು ಗಮನಿಸಿ, ಈ ವಾಹನಗಳ ಬಗ್ಗೆ ಮಾತನಾಡೋಣ.







NOT TO BE REPUBLISHED TBS

- ಇಲ್ಲಿರುವ ವಾಹನಗಳನ್ನು ನೀನು ನೋಡಿರುವೆಯಾ? ಹಾಗಾದರೆ ಎಲ್ಲಿ?
- ಈ ವಾಹನಗಳನ್ನು ಯಾವ ಯಾವ ಸಂದರ್ಭಗಳಲ್ಲಿ ಬಳಸುತ್ತಾರೆ? ತಿಳಿಸು.
- ಈ ವಾಹನಗಳನ್ನು ಸಂಪರ್ಕಿಸಲು ಬಳಸುವ ದೂರವಾಣಿ ಸಂಖ್ಯೆಗಳು ಯಾವುವು?

* ನನಗೆ ಅರ್ಥವಾಗಿದೆ ☐
* ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

6

## 6.2 ಎಚ್ಚರ ! ಎಚ್ಚರ !

2

**ಸೂಚನೆ :** ಈ ಚಿತ್ರಗಳನ್ನು ಗಮನಿಸಿ, ಪ್ರಶ್ನೆಗಳಿಗೆ ಉತ್ತರಿಸೋಣ.





- ಈ ಎರಡೂ ಚಿತ್ರಗಳಲ್ಲಿ ತಪ್ಪು ಸಂದೇಶಗಳಿವೆ. ಅವು ಏನೆಂದು ಪತ್ತೆ ಹಚ್ಚುವೆಯಾ?
- ನಾವೂ ಹೀಗೆ ತಪ್ಪಾಗಿ ನಡೆದುಕೊಂಡಲ್ಲಿ, ಆಗುವ ಅಪಾಯಗಳೇನು? ಚರ್ಚಿಸೋಣ.

| | |
|---|---|
| * ನನಗೆ ಅರ್ಥವಾಗಿದೆ | ☐ |
| * ನನಗೆ ಸಹಾಯ ಬೇಕಿದೆ | ☐ |

ಶಿಕ್ಷಕರ ಸಹಿ :
ದಿನಾಂಕ :

6

## 6.3 ಸಂಕೇತಗಳ ಸನ್ನಿವೇಶ

2

**ಸೂಚನೆ :** ನೀಡಿರುವ ಪದಗಳನ್ನು ಬಳಸಿ, ಸನ್ನಿವೇಶವನ್ನು ಪೂರ್ಣಗೊಳಿಸೋಣ.

ಸೈಕಲ್‌ಪಾರ್ಕ್, ನಿಲ್ಲುವರು, ಹೆಲ್ಮೆಟ್, ಕೆಂಪು, ಅಪಘಾತ ವಲಯ, ಸೈಕಲ್, ಬಲಕ್ಕೆ, ಎಡಕ್ಕೆ, ಸಿದ್ಧರಾಗುವರು, ಹೊರಡುವರು, ಶಾಲೆ, ಚಿಂಟು, ಚಿಂಕಿ, ಗುಂಡಿ ಅಗೆಯುವುದು, ಹಸಿರು, ಹಳದಿ, ಇಬ್ಬರೂ.

 ________ ಮತ್ತು ________  ________ ಧರಿಸಿ  ______ ಸವಾರಿ ಮಾಡಿಕೊಂಡು ಹೊರಟರು.  ____________ ದಾಟಿಕೊಂಡು ಈ ಸಂಕೇತ ನೋಡಿ  __________ ತಿರುಗಿದರು.  _______ ದೀಪ ಕಂಡಾಗ _________.  ________ ದೀಪ ಕಂಡಾಗ _______,  _____ ದೀಪ ಕಂಡಾಗ _______  _________ ದಿಂದ ಪಾರಾಗಿ.  _________ ತಿರುಗಿ  ______ ಮಾಡಿ,  _____ ತಲುಪಿದರು.

@KTBS NOT TO BE REPUBLISHED

**ಹೀಗೆ ಮಾಡು :**

- ಮನೆಯಿಂದ ಶಾಲೆಗೆ ಬರುವಾಗ ಅಥವಾ ಹೊರಗಡೆ ಹೋದಾಗ ಯಾವೆಲ್ಲಾ ರಸ್ತೆ ಸಂಕೇತಗಳನ್ನು ನೀನು ಗಮನಿಸಿರುವೆ? ಅದರ ಬಗ್ಗೆ ತರಗತಿಯಲ್ಲಿ ಹಂಚಿಕೊ.

| | |
|---|---|
| * ನನಗೆ ಅರ್ಥವಾಗಿದೆ | |
| * ನನಗೆ ಸಹಾಯ ಬೇಕಿದೆ | |

ಶಿಕ್ಷಕರ ಸಹಿ :
ದಿನಾಂಕ :

# 6.4 ಜಾಗ್ರತೆ ! ಅಪಾಯ ಗ್ಯಾರಂಟಿ!



**ಸೂಚನೆ :** ಚಿತ್ರಗಳನ್ನು ಗಮನಿಸಿ, ಇಲ್ಲೇನಾಗುತ್ತಿದೆ ಎಂಬುದನ್ನು ವಿವರಿಸೋಣ.










- ಇಂತಹ ಅಪಾಯಕಾರಿ ಅಭ್ಯಾಸಗಳನ್ನು ಎಲ್ಲೆಲ್ಲಿ ನೋಡಿರುವೆ? ಯೋಚಿಸಿ ಹೇಳು.
- ಒಂದೊಂದೇ ಚಿತ್ರಗಳನ್ನು ಗಮನಿಸಿ, ಆಗಬಹುದಾದ ಅಪಾಯಗಳ ಬಗ್ಗೆ ಶಿಕ್ಷಕರೊಂದಿಗೆ ಚರ್ಚಿಸೋಣ.

6

## 6.5 ಯಾವುದಕ್ಕೆ ಯಾವುದು?

2

**ಸೂಚನೆ :** ಕೆಳಗಿನ ಸುರಕ್ಷತಾ ಫಲಕಗಳನ್ನು ಗಮನಿಸಿ, ಮೇಲಿನ ಚಿತ್ರಗಳಿಗೆ ಸರಿ ಹೊಂದುವ ಕ್ರಮಸಂಖ್ಯೆಯನ್ನು ಬರೆಯೋಣ.









NOT TO BE REPUBLISHED @KTBS


1


2


3


4



5


6

* ನನಗೆ ಅರ್ಥವಾಗಿದೆ
* ನನಗೆ ಸಹಾಯ ಬೇಕಿದೆ

ಶಿಕ್ಷಕರ ಸಹಿ :
ದಿನಾಂಕ :

6

# 6.6 ಇದನ್ನು ನಾನು ಅರಿತಿರುವೆ

3

**ಸೂಚನೆ:** ಸರಿಯಾದ ಕೆಲಸಗಳ ಮುಂದೆ  ಚಿಹ್ನೆಯ ಗುರುತು ಹಾಕೋಣ. ಸರಿ ಇಲ್ಲದ ಕೆಲಸಗಳ ಮುಂದೆ  ಚಿಹ್ನೆಯ ಗುರುತು ಹಾಕೋಣ.

| ಕ್ರಮ ಸಂಖ್ಯೆ | ಹೇಳಿಕೆಗಳು |  |  |
|---|---|---|---|
| 01 | ವಾರಕ್ಕೊಮ್ಮೆ ನೈಲ್ ಕಟರ್‌ನಿಂದ ಉಗುರುಗಳನ್ನು ಕತ್ತರಿಸುವೆ. | | |
| 02 | ಚೂಪಾದ ವಸ್ತುಗಳನ್ನು ಜಾಗರೂಕತೆಯಿಂದ ಬಳಸುವೆ. | | |
| 03 | ಚಾಕು ಬಳಸಿ ಹಣ್ಣು ತರಕಾರಿ ಕತ್ತರಿಸುವೆ. | | |
| 04 | ರಸ್ತೆ ಮಧ್ಯೆ ಕೈ ಬಿಟ್ಟು ಸೈಕಲ್ ಸವಾರಿ ಮಾಡುವೆ. | | |
| 05 | ತೆರೆದ ಕೊಳವೆ ಬಾವಿ ಇರುವಲ್ಲಿಗೆ ಹೋಗುವೆ. | | |
| 06 | ವಾಹನದಲ್ಲಿ ಹೋಗುವಾಗ ಕೈ\ತಲೆಯನ್ನು ಹೊರಗೆ ಹಾಕುವೆ. | | |
| 07 | ರಸ್ತೆ ಸುರಕ್ಷತಾ ನಿಯಮಗಳನ್ನು ಪಾಲಿಸುವೆ. | | |
| 08 | ಕರೆಂಟ್ ವೈರ್, ಸ್ವಿಚ್ ಬೋರ್ಡ್‌ನಿಂದ ದೂರ ಸರಿಯುವೆ. | | |
| 09 | ಗೆಳೆಯರೊಂದಿಗೆ ಈಜಾಡಲು ಹೋಗುವೆ. | | |
| 10 | ಪಠ್ಯಪುಸ್ತಕಗಳ ಹಾಳೆಯನ್ನು ಹರಿಯದಂತೆ ನೋಡಿಕೊಳ್ಳುವೆ. | | |
| 11 | ನಿಂಬೆಹಣ್ಣಿನ ಪಾನಕವನ್ನು ನಾನೇ ಸ್ವತಃ ತಯಾರಿಸುವೆ. | | |
| 12 | ನನ್ನ ಶೂ ಲೇಸ್ ಅನ್ನು ನಾನೇ ಕಟ್ಟಿಕೊಳ್ಳುವೆ. | | |

NOT TO BE REPUBLISHED @KTBS

7

## 7.1 ಇವರನ್ನು ಸ್ಮರಿಸಿ ಗೌರವಿಸು

2

**ಸೂಚನೆ :** ಈ ಪದ್ಯವನ್ನು ರಾಗವಾಗಿ ಹಾಡೋಣ.



ನವಮಾಸ ಹೊತ್ತು ನನ್ನನು ಹೆತ್ತು
ಸಾಕಿದ ತಾಯಿಗೆ ವಂದನೆ



ಮೈಮುರಿ ದುಡಿದು ನನ್ನನು ಸಲುಹಿ
ಬೆಳೆಸಿದ ತಂದೆಗೆ ವಂದನೆ



ವಿದ್ಯಾ ಬುದ್ಧಿ ಬಾಲ್ಯದಿ ಕಲಿಸಿ
ಹರಸಿದ ಗುರುವಿಗೆ ವಂದನೆ



ಬಗೆ ಬಗೆ ರೋಗವ ವಾಸಿ ಮಾಡುವ
ವೈದ್ಯೆಗೆ ಮಾಡುವೆ ವಂದನೆ



ನಿತ್ಯದಿ ದುಡಿದು ಅನ್ನವ ನೀಡುವ
ರೈತಗೆ ಮಾಡುವೆ ವಂದನೆ



ನಾಡಿನ ರಕ್ಷಣೆ ನಿತ್ಯದಿ ಮಾಡುವ
ಯೋಧಗೆ ಮಾಡುವೆ ವಂದನೆ

ಕವಿ: ಎಲ್.ಕೆ. ಕಂಬಾರ

ಇನ್ನೂ ಯಾರನ್ನೆಲ್ಲಾ ಸ್ಮರಿಸಿ ನಾವು ಗೌರವಿಸಬೇಕು? ಈ ಬಗ್ಗೆ ತರಗತಿಯಲ್ಲಿ ಚರ್ಚಿಸೋಣ.

@KTBS NOT TO BE REPUBLISHED

7

## 7.2 ಯಾರಿಗೆ ಯಾರ್ಯಾರು?

2

**ಸೂಚನೆ :** ಈ ಚಿತ್ರಗಳನ್ನು ಗಮನಿಸಿ, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸೋಣ.

| | |
|---|---|
|  |  |
| ಅನಾರೋಗ್ಯದಿಂದ ಮಲಗಿರುವ ಇವರಿಗೆ ಯಾರ ನೆರವಿನ ಅಗತ್ಯವಿದೆ? | ಊರಿಂದೂರಿಗೆ ಜನರು ಪ್ರಯಾಣಿಸಲು ಯಾರ ಅಗತ್ಯವಿದೆ? |
|  |  |
| ಈ ದವಸ ಧಾನ್ಯ ಮನೆ ಸೇರಲು ಯಾರು ಯಾರು ಸಹಾಯ ಮಾಡುತ್ತಾರೆ? | ಶಾಲೆಯಲ್ಲಿ ನಮ್ಮ ಕಲಿಕೆಗೆ ಯಾರ ನೆರವು ಬೇಕು? |

@KTBS Not to be Republished

**ಹೀಗೆ ಮಾಡು :**

ಒಂದು ಲೋಟ ಕುಡಿಯುವ ನೀರು ನಮ್ಮ ಕೈ ಸೇರಲು ಅದರ ಹಿಂದೆ ಯಾರ ಯಾರ ನೆರವು ಅಡಗಿದೆ ಎಂಬುದರ ಬಗ್ಗೆ ಚರ್ಚಿಸೋಣ.

7

## 7.3 ಇವರಂತೆ ನಾನಾಗುತ್ತೇನೆ

**ಸೂಚನೆ:** ಚಿತ್ರ ಗಮನಿಸು. ಈ ಸೇವೆಗಳನ್ನು ನಮಗೆ ಒದಗಿಸಲು ಯಾವ ವೃತ್ತಿಯು ನೆರವು ನೀಡುತ್ತದೆ ಎಂಬುದನ್ನು ಚರ್ಚಿಸೋಣ.














@KTBS
NOT TO BE REPUBLISHED

* ನನಗೆ ಅರ್ಥವಾಗಿದೆ ☐
* ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :

ದಿನಾಂಕ :

## 7.4 ಥಟ್ ಅಂತ ಉಪಾಯ ಹೇಳು



**ಸೂಚನೆ:** ಕೊಟ್ಟಿರುವ ಅಪಾಯಕಾರಿ ಸನ್ನಿವೇಶಗಳಿಗೆ ತಕ್ಷಣದ ಉಪಾಯವನ್ನು ಬರೆಯೋಣ.

| ಸನ್ನಿವೇಶಗಳು | ನೀನೇನು ಮಾಡುವೆ? |
|---|---|
| ಆಕಸ್ಮಿಕವಾಗಿ ಸುಟ್ಟಿಕೊಂಡಾಗ | |
| ಬೆರಳಿಗೆ ಚಾಕು ತಗುಲಿ ರಕ್ತ ಸೋರಿದಾಗ | |
| ಕಾಲಿಗೆ ಮುಳ್ಳು ಚುಚ್ಚಿದಾಗ | |
| ನೀರಿನ ಸಂಪು ಬಳಿಯಲ್ಲಿ ಮಗುವೊಂದು ಆಡುತ್ತಿರುವಾಗ | |
| ಕಣ್ಣಿನಲ್ಲಿ ಧೂಳು ಬಿದ್ದಾಗ | |
| ಕಣ್ಣೆದುರಲ್ಲೇ ಸ್ನೇಹಿತ ಕಾಲು ಜಾರಿ ಬಿದ್ದಾಗ | |
| ಅಪರಿಚಿತ ವ್ಯಕ್ತಿಯು ತಿನ್ನಲು ತಿನಿಸುಗಳನ್ನು ಕೊಟ್ಟಾಗ | |
| ವಿದ್ಯುತ್ ವೈರ್ ಬಿದ್ದಿರುವುದನ್ನು ಕಂಡಾಗ | |
| ಜೇನುಗೂಡುಗಳನ್ನು ನೋಡಿದಾಗ | |

@KTBS NOT TO BE REPUBLISHED

# 7.5 ಹೀಗೂ ಮಾಡೋಣ



**ಸೂಚನೆ:** ಈ ಚಿತ್ರಗಳನ್ನು ಗಮನಿಸಿ, ಅಪಾಯಕಾರಿ ಸನ್ನಿವೇಶಗಳ ಬಗ್ಗೆ ಮಾತನಾಡೋಣ.






@KTBS NOT TO BE REPUBLISHED

ಸರಿಯಾದ ಸುರಕ್ಷತಾ ಕ್ರಮಗಳಿಗೆ (✓) ಗುರುತನ್ನು, ತಪ್ಪಾಗಿದ್ದರೆ (X) ಗುರುತನ್ನು ಹಾಕೋಣ.

| | |
|---|---|
| 1. ವಾಹನಗಳ ಹಿಂದೆ–ಮುಂದೆ ಆಟವನ್ನು ಆಡುವುದಿಲ್ಲ. | |
| 2. ಬ್ಲೇಡಿನಿಂದ ಪೆನ್ಸಿಲ್ ಅನ್ನು ಚೂಪು ಮಾಡುವೆ. | |
| 3. ಹರಿತವಾದ ಚಾಕವನ್ನು ಜಾಗರೂಕತೆಯಿಂದ ಬಳಸುತ್ತೇನೆ. | |
| 4. ಬಿಸಿಯಾದ ಪಾತ್ರೆಯನ್ನು ಬರಿಗೈಯಿಂದ ಮುಟ್ಟುತ್ತೇನೆ | |
| 5. ವಿದ್ಯುತ್ ಸ್ವಿಚ್ ಬೋರ್ಡಿನಲ್ಲಿ ಕೈ ಬೆರಳನ್ನು ಹಾಕುತ್ತೇನೆ. | |

7

## 7.6 ನನ್ನವರ ವೃತ್ತಿಗಳು

3

**ಸೂಚನೆ:** ನಿನ್ನ ಮನೆಯ ಹಿರಿಯರು ಯಾವ ಯಾವ ವೃತ್ತಿಗಳನ್ನು ಮಾಡುತ್ತಾರೆ ಎಂಬ ಬಗ್ಗೆ ಮಾಹಿತಿ ಸಂಗ್ರಹಿಸಿ ಬರೆಯೋಣ.

| ಕ್ರ. ಸಂ. | ಕುಟುಂಬದ ಸದಸ್ಯರ ಹೆಸರು | ನಿರ್ವಹಿಸುವ ವೃತ್ತಿಗಳು |
|---|---|---|
| | | |
| | | |
| | | |
| | | |
| | | |

@KTBS NOT TO BE REPUBLISHED

- ನೀನು ಮುಂದೆ ಏನಾಗ ಬಯಸುವೆ ? ಚರ್ಚಿಸು.
- ನೀನು ಇಷ್ಟಪಡುವ ಯಾವುದಾದರೂ 5 ವೃತ್ತಿಗಳ ಹೆಸರನ್ನು ಕೊಟ್ಟಿರುವ ಜಾಗದಲ್ಲಿ ಬರೆ.

| ಕ್ರ. ಸಂ. | ನೀನು ಇಷ್ಟಪಡುವ ವೃತ್ತಿಗಳು |
|---|---|
| 1 | |
| 2 | |
| 3 | |
| 4 | |
| 5 | |

7

## 7.7 ನನ್ನ ಕೆಲಸ ನನ್ನ ಹೆಮ್ಮೆ

3

**ಸೂಚನೆ:** ಈ ಚಿತ್ರವನ್ನು ಗಮನಿಸಿ, ಇದರ ಬಗ್ಗೆ ಮಾತನಾಡೋಣ.



NOT TO BE REPUBLISHED KTBS

1. ಮನೆಯಲ್ಲಿ ನೀನು ಮಾಡುವ ಕೆಲಸಗಳು ಯಾವುವು?

___

2. ನಿನ್ನ ಕುಟುಂಬದಲ್ಲಿ ಇತರ ಸದಸ್ಯರು ಮಾಡುವ ಕೆಲಸಗಳು ಯಾವುವು?

___

3. ಮನೆಯ ಒಳಗೆ ಮಾಡುವ ಕೆಲಸಗಳು ಯಾವುವು?

___

4. ಮನೆಯ ಹೊರಗೆ ಮಾಡುವ ಕೆಲಸಗಳು ಯಾವುವು?

___

8

## 8.1 ನಾವೆಲ್ಲರೂ ಒಂದೇ......

2

**ಸೂಚನೆ:** ಈ ಚಿತ್ರಗಳನ್ನು ಗಮನಿಸಿ, ಇದರ ಬಗ್ಗೆ ಮಾತನಾಡೋಣ.





NOT TO BE REPUBLISHED @KTBS

- ಈ ಎರಡೂ ಚಿತ್ರದಲ್ಲಿ ಕಾಣುವ ವ್ಯತ್ಯಾಸಗಳೇನು?
- ಶಾಲೆಯಲ್ಲಿ ಇಂತಹ ಸ್ನೇಹಿತರು ಇದ್ದರೆ ಅವರಿಗೆ ನಾವು ಹೇಗೆ ಸಹಕಾರ ನೀಡಬೇಕು?
- ಎಲ್ಲರೂ ಸೇರಿ ಪರಸ್ಪರ ನೆರವಿನಿಂದ ಆಟವಾಡುವ ಬಗ್ಗೆ ತರಗತಿಯಲ್ಲಿ ಮಾತನಾಡೋಣ.

| | |
|---|---|
| * ನನಗೆ ಅರ್ಥವಾಗಿದೆ | ☐ |
| * ನನಗೆ ಸಹಾಯ ಬೇಕಿದೆ | ☐ |

ಶಿಕ್ಷಕರ ಸಹಿ :
ದಿನಾಂಕ :

8

# 8.2 ಆಟ ಆಡೋಣ

2

**ಸೂಚನೆ:** ಈ ಚಿತ್ರದಲ್ಲಿನ ಆಟಗಳು ನಿನಗೆ ಗೊತ್ತೇ? ಈ ಆಟಗಳನ್ನು ನಾವೂ ಆಡೋಣ.













## ಹೀಗೆ ಮಾಡು :

- ಶಿಕ್ಷಕರ ಸಹಾಯದಿಂದ ಇಲ್ಲಿನ ಒಂದೊಂದು ಆಟಗಳನ್ನು ಆಡೋಣ. ಈ ಆಟ ಆಡಲು ನಮ್ಮ ದೇಹದ ಯಾವ ಅಂಗಗಳ ಸಮತೋಲನ ಅಗತ್ಯವಿದೆ ಎಂದು ತರಗತಿಯಲ್ಲಿ ಚರ್ಚಿಸೋಣ.
- ಗೆಳೆಯರೆಲ್ಲಾ ಸೇರಿ ಬುಗುರಿ ಆಡುತ್ತಾ ಕೈ ಮೇಲೆ ಅದನ್ನು ಬಿಟ್ಟುಕೊಳ್ಳೋಣ.

| | |
|---|---|
| * ನನಗೆ ಅರ್ಥವಾಗಿದೆ | |
| * ನನಗೆ ಸಹಾಯ ಬೇಕಿದೆ | |

ಶಿಕ್ಷಕರ ಸಹಿ :
ದಿನಾಂಕ :

NOT TO BE REPUBLISHED

# 8 8.3 ಆಟಗಳ ನೋಟ 2

**ಸೂಚನೆ:** ಸುತ್ತುವ, ತಿರುಗುವ, ಜಾರುವ ಆಟಗಳನ್ನು ಗಮನಿಸೋಣ. ಈ ಆಟಗಳನ್ನು ಸುರಕ್ಷಿತವಾಗಿ ಆಡೋಣ.


©KTBS NOT TO BE REPUBLISHED

ಹೇಳಿಕೆಗಳನ್ನು ಗಟ್ಟಿಯಾಗಿ ಓದಿ, ಹೌದು/ಇಲ್ಲ ಎಂದು ಬರೆಯೋಣ.

| ಕ್ರ.ಸಂ. | ಹೇಳಿಕೆಗಳು | ಹೌದು/ಇಲ್ಲ |
|---|---|---|
| 1 | ತಿರುಗಣಿಯನ್ನು ಜೋರಾಗಿ ತಿರುಗಿಸುತ್ತೇನೆ. | |
| 2 | ವಿಶೇಷ ಅಗತ್ಯವುಳ್ಳವರಿಗೆ ಆಟವಾಡಲು ಸಹಾಯ ಮಾಡುತ್ತೇನೆ. | |
| 3 | ಎಲ್ಲರೂ ಆಟಕ್ಕೆ ಬರುವವರೆಗೂ ಕಾಯುವುದಿಲ್ಲ. | |
| 4 | ವಿಶೇಷ ಚೇತನರೊಂದಿಗೆ ಸಂತೋಷದಿಂದ ಆಟವಾಡುತ್ತೇನೆ. | |
| 5 | ಜಾರುಬಂಡಿಯಲ್ಲಿ ಕುಳಿತು ಜಾರದೆ ಓಡುತ್ತೇನೆ. | |
| 6 | ಜೋಕಾಲಿಯಲ್ಲಿ ಚೇಷ್ಟೆ ಮಾಡುತ್ತಾ ಜೀಕುತ್ತೇನೆ. | |

# 8

## 8.4 ಜಂಗಲ್ ಜಿಮ್

2

**ಸೂಚನೆ:** ಈ ಆಟಗಳು ಯಾವ ರೀತಿಯ ಆಟಗಳಾಗಿವೆ ಎಂಬುದನ್ನು ತಿಳಿಯೋಣ.





@KTBS NOT TO BE REPUBLISHED

- ಶಿಕ್ಷಕರು / ಹಿರಿಯರ ಸಹಾಯದಿಂದ ಜಂಗಲ್ ಜಿಮ್ ಆಟಗಳು ಹೇಗಿರುತ್ತವೆ ಎಂಬುದನ್ನು ತಿಳಿದುಕೊಳ್ಳೋಣ.
- ಇಂತಹ ಆಟಗಳಿಗೆ ನಮ್ಮ ದೇಹದ ಯಾವ ಯಾವ ಅಂಗಗಳ ಸಮತೋಲನ ಬೇಕು ಎಂಬುದನ್ನು ಶಿಕ್ಷಕರೊಂದಿಗೆ ಚರ್ಚಿಸೋಣ.

| | |
|---|---|
| * ನನಗೆ ಅರ್ಥವಾಗಿದೆ | |
| * ನನಗೆ ಸಹಾಯ ಬೇಕಿದೆ | |

ಶಿಕ್ಷಕರ ಸಹಿ :
ದಿನಾಂಕ :

8

# 8.5 ನನ್ನ ಯೋಗ ನನ್ನ ಆರೋಗ್ಯ

**ಸೂಚನೆ:** ಈ ಯೋಗ ಚಿತ್ರಗಳನ್ನು ಗಮನಿಸಿ, ಇದರ ಬಗ್ಗೆ ಮಾತನಾಡೋಣ.

| | |
|---|---|
|  | • ಈ ಆಸನದ ಹೆಸರು ಏನೆಂದು ತಿಳಿಯೋಣ.<br>• ಇದನ್ನು ಮಾಡುವುದು ಹೇಗೆಂದು ಅಭ್ಯಾಸ ಮಾಡೋಣ. |
|     | • ಚಿತ್ರಗಳಲ್ಲಿನ 4 ಆಸನಗಳ ಭಂಗಿಯನ್ನು ಗಮನಿಸೋಣ.<br>• ಯಾವುದರ ನಂತರ ಯಾವ ಆಸನದ ಭಂಗಿ ಬರಬೇಕೆಂದು ಅದರ ಕೆಳಗೆ ಕ್ರಮ ಸಂಖ್ಯೆ ಬರೆಯೋಣ. |

NOT TO BE REPUBLISHED
@KTBS

| | |
|---|---|
| * ನನಗೆ ಅರ್ಥವಾಗಿದೆ | ☐ |
| * ನನಗೆ ಸಹಾಯ ಬೇಕಿದೆ | ☐ |

ಶಿಕ್ಷಕರ ಸಹಿ :
ದಿನಾಂಕ :

# 8

## 8.6 ಆಸನಗಳ ಅಭ್ಯಾಸ, ಆಗಲಿ ಹವ್ಯಾಸ

2

**ಸೂಚನೆ:** ವಿವಿಧ ರೀತಿಯ ಯೋಗಾಸನಗಳನ್ನು ಮಾಡುವುದು ಹೇಗೆಂದು ಶಿಕ್ಷಕರ ಸಹಾಯದಿಂದ ಕಲಿಯೋಣ.



@KTBS NOT TO BE REPUBLISHED

**ಸುಗಮಕಾರರಿಗೆ ಸೂಚನೆ :**

- ದಿನಕ್ಕೊಂದು ಯೋಗಾಸನ ಮಾಡುವುದನ್ನು ಕಲಿಯಲು ಪ್ರೇರೇಪಿಸಿ.
- ಒಂದೊಂದು ಆಸನಗಳನ್ನು ಮಾಡಲು ಇರುವ ಸರಿಯಾದ ಕ್ರಮಗಳನ್ನು ಅರ್ಥೈಸಿ.
- ಯೋಗಾಸನ ಮಾಡುವುದರಿಂದ ನಮಗಾಗುವ ಪ್ರಯೋಜನಗಳೇನು ಎಂಬುದನ್ನು ಸರಳವಾಗಿ ಮನದಟ್ಟು ಮಾಡಿ.

| | |
|---|---|
| * ನನಗೆ ಅರ್ಥವಾಗಿದೆ | |
| * ನನಗೆ ಸಹಾಯ ಬೇಕಿದೆ | |

ಶಿಕ್ಷಕರ ಸಹಿ :
ದಿನಾಂಕ :

8

# 8.7 ಯೋಜನಾ ಕಾರ್ಯ

3

**ಸೂಚನೆ :** ಗೆಳೆಯರ ಗುಂಪಿನಲ್ಲಿ ಯಾವುದಾದರೂ ಎರಡು ಯೋಜನೆಯನ್ನು ತಯಾರಿಸೋಣ.



@KTBS NOT TO BE REPUBLISHED

**ಹೀಗೆ ಮಾಡು:**

**ಚಟುವಟಿಕೆ 1:** ನಮ್ಮ ಹಿರಿಯರು ಯಾವ ಯಾವ ಆಟಗಳನ್ನು ಆಡುತ್ತಿದ್ದರು ಎಂಬುದರ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ತರಗತಿಯಲ್ಲಿ ಸ್ನೇಹಿತರೆದುರು ಹಂಚಿಕೊಳ್ಳುವುದು.

**ಚಟುವಟಿಕೆ 2:** ಮನೆಯೊಳಗೆ ಆಡುವ ಆಟಗಳಾವುವು ಎಂಬುದನ್ನು ಪಟ್ಟಿ ಮಾಡಿ, ಆ ವಿವರಗಳನ್ನು ತರಗತಿಯಲ್ಲಿ ವಿವರಿಸುವುದು.

**ಚಟುವಟಿಕೆ 3:** ಒಬ್ಬರೇ ಆಡುವ ಆಟಗಳು ಮತ್ತು ಗುಂಪಿನಲ್ಲಿ ಗೆಳೆಯರೆಲ್ಲಾ ಸೇರಿ ಆಡುವ ಆಟಗಳಾವುವು ಎಂಬುದರ ಮಾಹಿತಿಯನ್ನು ಸಂಗ್ರಹಿಸಿ, ತರಗತಿಯಲ್ಲಿ ವಿವರಿಸುವುದು.

**ಚಟುವಟಿಕೆ 4:** ಅಳಗುಳಿ ಮನೆ, ಚೌಕಾಬಾರ, ಕುಂಟೆಬಿಲ್ಲೆ ಈ ಮೂರು ಆಟಗಳಲ್ಲಿ ಯಾವುದಾದರೂ ಒಂದು ಆಟವನ್ನು ಕಲಿತು, ಆಡುವ ಕ್ರಮಗಳನ್ನು ತರಗತಿಯಲ್ಲಿ ವಿವರಿಸುವುದು.

| | |
|---|---|
| * ನನಗೆ ಅರ್ಥವಾಗಿದೆ | ☐ |
| * ನನಗೆ ಸಹಾಯ ಬೇಕಿದೆ | ☐ |

ಶಿಕ್ಷಕರ ಸಹಿ :
ದಿನಾಂಕ :

8

## 8.8 ಚಿತ್ರ ನೋಡು ಮಾತನಾಡು

3

**ಸೂಚನೆ :** ಈ ಚಿತ್ರಗಳನ್ನು ಗಮನಿಸಿ ಇವುಗಳ ಬಗ್ಗೆ ಮಾತನಾಡೋಣ.





©KTBS NOT TO BE REPUBLISHED

**ಉತ್ತರಿಸು :**

- ನೀನು ಹೆಚ್ಚು ದೂರ ನಡೆದಿರುವ ಸಂದರ್ಭಗಳು ಯಾವುವು? ನೆನಪಿಸಿಕೊಂಡು ಹೇಳು.
- ನೀನು ಯಾವ ಯಾವ ಸಂದರ್ಭಗಳಲ್ಲಿ ಹೆಚ್ಚು ದೂರ ಓಡುವೆ? ವಿವರಿಸು.
- ಪ್ರತೀ ದಿನ ಬೆಳಗ್ಗೆ ಮತ್ತು ಸಂಜೆ ವಾಕಿಂಗ್ ಮಾಡುವ ಜನರನ್ನು ನೀನು ನೋಡಿರುವೆ. ಅವರೇಕೆ ವಾಕಿಂಗ್ ಮಾಡುತ್ತಾರೆ ? ಈ ಬಗ್ಗೆ ಹಿರಿಯರ ಸಹಾಯದಿಂದ ತಿಳಿ.

| | |
|---|---|
| * ನನಗೆ ಅರ್ಥವಾಗಿದೆ | ☐ |
| * ನನಗೆ ಸಹಾಯ ಬೇಕಿದೆ | ☐ |

ಶಿಕ್ಷಕರ ಸಹಿ :
ದಿನಾಂಕ :

8

## 8.9 ನಾನು ಇದನ್ನು ಮಾಡುವೆ

**ಸೂಚನೆ :** ಇಲ್ಲಿ ಕೊಟ್ಟಿರುವ ಹೇಳಿಕೆಗಳನ್ನು ಗಮನಿಸಿ, ನೀನು ಮಾಡಲು ಸಾಧ್ಯವಿರುವ ಕೆಲಸಗಳಿಗೆ (✓) ಗುರುತನ್ನು, ಸಾಧ್ಯವಿಲ್ಲದಿದ್ದರೆ (✗) ಗುರುತನ್ನು ಹಾಕೋಣ.

| ಕ್ರ. ಸಂ. | ಸಂಕೇತ | ಕೆಲಸಗಳು | ✓ / ✗ |
|---|---|---|---|
| 1. |  | ನೀರು ತುಂಬಿರುವ ಒಂದು ಬಿಂದಿಗೆಯನ್ನು ಎತ್ತಬಲ್ಲೆ. | |
| 2. |  | ಒಂದು ಬಾಣಲೆ ಮಣ್ಣನ್ನು ಎತ್ತಿ ಗಿಡಕ್ಕೆ ಸುರಿಯಬಲ್ಲೆ. | |
| 3. |  | ಬಟ್ಟೆಗಳನ್ನು ಮಡಿಸಿ, ಜೋಡಿಸಿ ಇಡಬಲ್ಲೆ. | |
| 4. |  | 15 ನಿಮಿಷ ಒಂಟಿ ಕಾಲಲ್ಲಿ ಸಮತೋಲನದಿಂದ ನಿಲ್ಲಬಲ್ಲೆ. | |
| 5. |  | ಕನಿಷ್ಟ 50 ಮೀ. ದೂರದವರೆಗೂ ವೇಗವಾಗಿ ಓಡಬಲ್ಲೆ. | |
| 6. |  | ಸ್ವತಂತ್ರವಾಗಿ ರಸ್ತೆಯಲ್ಲಿ ಸೈಕಲ್‌ನ್ನು ಓಡಿಸಬಲ್ಲೆ. | |
| 7. |  | ಗಿಡಗಳಿಗೆ ನೀರು ಹಾಕಿ, ಚಿಗುರು ಚಿವುಟದಂತೆ ಪೋಷಿಸಬಲ್ಲೆ. | |

NOT TO BE REPUBLISHED
@KTBS

* ನನಗೆ ಅರ್ಥವಾಗಿದೆ ☐
* ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

9

## 9.1 ಚಿತ್ರ ನೋಡು ಮಾತನಾಡು

2

**ಸೂಚನೆ :** ಚಿತ್ರಗಳನ್ನು ಗಮನಿಸಿ. ಇವರೆಲ್ಲಾ ಹೇಗೆ ವರ್ತಿಸುತ್ತಿದ್ದಾರೆ ಎಂಬುದನ್ನು ತಿಳಿಯೋಣ.



@KTBS NOT TO BE REPUBLISHED

1. ಒಂದೊಂದೇ ಚಿತ್ರವನ್ನು ಗಮನಿಸು. ಇಲ್ಲಿನ ಭಾವನೆಗಳ ಬಗ್ಗೆ ಮಾತನಾಡು.
2. ಇಲ್ಲಿನ ಚಿತ್ರಗಳಂತೆಯೇ ಭಾವನೆಗಳನ್ನು ಅಣಕು ಮಾಡಿ ತೋರಿಸು.

| | |
|---|---|
| * ನನಗೆ ಅರ್ಥವಾಗಿದೆ | ☐ |
| * ನನಗೆ ಸಹಾಯ ಬೇಕಿದೆ | ☐ |

ಶಿಕ್ಷಕರ ಸಹಿ :
ದಿನಾಂಕ :

9

## 9.2 ಸರಿಯಾದುದನ್ನು ಹೊಂದಿಸು

3

**ಸೂಚನೆ :** ಇಲ್ಲಿನ ಭಾವನೆಗಳನ್ನು ಸರಿಯಾದ ಪದಗಳೊಂದಿಗೆ ಗೆರೆ ಎಳೆದು ಹೊಂದಿಸೋಣ.




@KTBS
NOT TO BE REPUBLISHED

ನಮಗೆ ಈ ರೀತಿಯ ಭಾವನೆಗಳು ಯಾವಾಗ ಬರುತ್ತವೆ? ಒಂದೊಂದೇ ಚಿತ್ರವನ್ನು ಗಮನಿಸಿ ತರಗತಿಯಲ್ಲಿ ವಿವರಿಸೋಣ.

| | |
|---|---|
| * ನನಗೆ ಅರ್ಥವಾಗಿದೆ | |
| * ನನಗೆ ಸಹಾಯ ಬೇಕಿದೆ | |

ಶಿಕ್ಷಕರ ಸಹಿ :
ದಿನಾಂಕ :

# 9.3 ನಾನು ನನ್ನ ಭಾವನೆ



**ಸೂಚನೆ :** ಹೇಳಿಕೆಗಳಿಗೆ ಸರಿಯಾದ ಚಿತ್ರಗಳನ್ನು ಗೆರೆ ಎಳೆದು ಹೊಂದಿಸೋಣ.

| ಕ್ರ. ಸಂ. | ಹೇಳಿಕೆಗಳು |
|---|---|
| 1 | ಇಷ್ಟದ ಆಟಿಕೆಯನ್ನು ಕಳೆದುಕೊಂಡೆನು. |
| 2 | ಓಟದ ಆಟದಲ್ಲಿ ಗೆದ್ದು ಬಂದೆನು. |
| 3 | ಜಾರಿ ಬಿದ್ದು ಗಾಯ ಮಾಡಿಕೊಂಡೆನು. |
| 4 | ಬಹುಮಾನವಾಗಿ ಸೈಕಲ್ ಪಡೆದುಕೊಂಡೆನು. |
| 5 | ಸ್ನೇಹಿತರೊಂದಿಗೆ ಕೋಪ ಮಾಡಿಕೊಂಡೆನು. |
| 6 | ದಾರಿಯಲ್ಲಿ ಹಾವು ಬರುವುದನ್ನು ನೋಡಿದೆನು. |
| 7 | ಪ್ರವಾಸಕ್ಕೆ ಹೋಗಲು ಮನೆಯಲ್ಲಿ ಒಪ್ಪಿಗೆ ಪಡೆದೆನು. |

| ಭಾವನೆಗಳ ಚಿತ್ರ |
|---|
|  |
|  |
|  |
|  |
|  |
|  |
|  |

@KTBS NOT TO BE REPUBLISHED

9

## 9.4 ಅಣಕು

**ಸೂಚನೆ :** ಈ ಹೇಳಿಕೆಗಳಿಗೆ ತಕ್ಕಂತೆ ಭಾವನೆಗಳನ್ನು ಅಣಕು ಮಾಡೋಣ.

| | | |
|---|---|---|
| 1 | ಖಾರದ ಮೆಣಸಿನಕಾಯಿ ತಿಂದಾಗ |  ಸ್‌ಸ್‌ಸ್.........ಸ್ |
| 2 | ಬಾಯಲ್ಲಿ ನೆಲ್ಲಿಕಾಯಿ ಜಗಿಯುವಾಗ |  ಲೊ............ಟೆ |
| 3 | ಮೈಮೇಲೆ ಆಕಸ್ಮಿಕವಾಗಿ ಜಿರಲೆ ಬಿದ್ದಾಗ |  ಓಓ ಓ ಓ ........! |
| 4 | ಸ್ಪರ್ಧೆಯಲ್ಲಿ ಗೆದ್ದು ಬಹುಮಾನ ಪಡೆದಾಗ |  ವಾಹ್........... |
| 5 | ಮೆಚ್ಚಿನ ನಾಯಿಮರಿಯನ್ನು ಕಳೆದುಕೊಂಡಾಗ |  ಅಯ್ಯೋ..........?! |
| 6 | ರಸ್ತೆಯಲ್ಲಿ ಬಿದ್ದು ಗಾಯ ಮಾಡಿಕೊಂಡಾಗ |  ಅಆ............ಆ |
| 7 | ಪೊಟರೆಗಳ ಬಳಿಯಲ್ಲಿ ಹಾವನ್ನು ಕಂಡಾಗ |  ಹಾವ್ರೂ.......! |
| 8 | ಶಿಕ್ಷಕರು ಚಟುವಟಿಕೆಗಳಿಗೆ ಸ್ಟಾರ್‌ಗಳನ್ನು ಕೊಟ್ಟಾಗ |  ..............! |
| 9 | ಅಮ್ಮನೊಂದಿಗೆ ಕೋಪ ಮಾಡಿಕೊಂಡಾಗ |  ಮ್‌ಮ್.........? |
| 10 | ಪುಟ್ಟ ಮಗು ಕಿಲಕಿಲ ನಗುವುದನ್ನು ನೋಡಿದಾಗ |  ಚ್‌ಚ್........ಚ್ |

NOT TO BE REPUBLISHED @KTBS

| | |
|---|---|
| * ನನಗೆ ಅರ್ಥವಾಗಿದೆ | ☐ |
| * ನನಗೆ ಸಹಾಯ ಬೇಕಿದೆ | ☐ |

ಶಿಕ್ಷಕರ ಸಹಿ :
ದಿನಾಂಕ :

# 9.5 ಬಗೆ ಬಗೆಯ ವೇಷಗಳು

**ಸೂಚನೆ :** ಚಿತ್ರಗಳನ್ನು ಗಮನಿಸಿ, ಈ ವೇಷ ಭೂಷಣಗಳು ಯಾವ ರಾಜ್ಯಗಳಿಗೆ ಸಂಬಂಧಿಸಿವೆ ಎಂಬುದರ ಬಗ್ಗೆ ಮಾತನಾಡೋಣ.



NOT TO BE REPUBLISHED @KTBS

**ಹೀಗೆ ಮಾಡು :**

- ಬೇರೆ ಬೇರೆ ರಾಜ್ಯಗಳ ಸಾಂಪ್ರದಾಯಿಕ ಉಡುಗೆ–ತೊಡುಗೆಗಳ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸು.
- ನಿಮ್ಮ ಮನೆ\ನೆರೆಹೊರೆಯವರು ಧರಿಸುವ ಸಾಂಪ್ರಾದಾಯಿಕ ಉಡುಗೆ–ತೊಡುಗೆಯನ್ನು ನೋಡಿದ್ದಲ್ಲಿ, ಅದರ ಬಗ್ಗೆ ತರಗತಿಯಲ್ಲಿ ಮಾತನಾಡು.
- ಶಿಕ್ಷಕರ ನೆರವಿನಿಂದ ವೇಷಭೂಷಣಗಳ ಛದ್ಮವೇಷ ಪ್ರದರ್ಶಿಸಿ.

# 9.6 ಭಿನ್ನತೆ ಮತ್ತು ವ್ಯತ್ಯಾಸಗಳು



**ಸೂಚನೆ :** ಈ ಚಿತ್ರಗಳನ್ನು ಗಮನಿಸೋಣ. ಕಾಣುವ ಭಿನ್ನತೆಗಳ ಬಗ್ಗೆ ಚರ್ಚಿಸೋಣ.









©KTBS NOT TO BE REPUBLISHED

- ಪ್ರತಿಯೊಂದು ದೇಶದ ಹವಾಮಾನ, ವಾಯುಗುಣ, ಮತ್ತು ಭೌಗೋಳಿಕ ಪರಿಸರದ ವ್ಯತ್ಯಾಸಗಳಿಂದ ನಮ್ಮ ದೇಹದ ರಚನೆಯಲ್ಲಿ ಕೆಲವು ಭಿನ್ನತೆಗಳು ಕಾಣಿಸುತ್ತವೆ ಎಂಬುದರ ಬಗ್ಗೆ ಶಿಕ್ಷಕರೊಂದಿಗೆ ಚರ್ಚಿಸೋಣ.
- ದೇಶದಿಂದ ದೇಶಕ್ಕೆ ಬಹುದೂರ ಹೋದಂತೆ ಜನರ ಕೂದಲು ಬಣ್ಣ, ಮೈ ಬಣ್ಣ, ಕಣ್ಣು ಮತ್ತು ಮೂಗುಗಳಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ. ಈ ಭಿನ್ನತೆಯ ಬಗ್ಗೆ ವಿವಿಧ ವಿಡಿಯೋ ತುಣುಕುಗಳನ್ನು ಗಮನಿಸೋಣ.

10

## 10.1 ಚಿತ್ರಕ್ಕೆ ನನ್ನ ಬಣ್ಣ

2

**ಸೂಚನೆ :** ಈ ಚಿತ್ರಕ್ಕೆ ಇಷ್ಟವಾದ ಬಣ್ಣವನ್ನು ತುಂಬೋಣ.



© KTBS NOT TO BE REPUBLISHED

- ಈ ಚಿತ್ರದಲ್ಲಿ ಏನು ನಡೆಯುತ್ತಿದೆ? ವಿವರಿಸು.
- ನಾಯಿ, ಕುರಿ, ಮೇಕೆ, ಹಸು, ಎಮ್ಮೆ ಇವುಗಳನ್ನು ಯಾವ ರೀತಿಯಲ್ಲಿ ಸ್ವಚ್ಛಗೊಳಿಸುತ್ತಾರೆ? ತಿಳಿಸು.
- ನೀನು ಯಾವುದಾದರೂ ಪ್ರಾಣಿಗೆ ಸ್ನಾನ ಮಾಡಿಸಿದ್ದರೆ ಅದರ ಬಗ್ಗೆ ಮಾತನಾಡು.
- ಪ್ರಾಣಿ-ಪಕ್ಷಿಗಳು ಹೇಗೆಲ್ಲಾ ಸ್ನಾನ ಮಾಡುತ್ತವೆ? ಯೋಚಿಸಿ ಹೇಳು.

## 10.2 ಚಿತ್ರ ನೋಡು ಮಾತನಾಡು



**ಸೂಚನೆ :** ಈ ಚಿತ್ರಗಳಿಗೆ ಇಷ್ಟವಾದ ಬಣ್ಣವನ್ನು ತುಂಬಿ ಮಾತನಾಡೋಣ.





@KTBS
NOT TO BE REPUBLISHED

- ನಮ್ಮಂತೆ ಪ್ರಾಣಿಗಳಿಗೂ ಆರೈಕೆಯ ಅಗತ್ಯವಿದೆ. ಯಾವ ಸಂದರ್ಭದಲ್ಲಿ ನಾವು ಅವುಗಳಿಗೆ ನೆರವಾಗಬೇಕು?
- ಪ್ರಾಣಿಗಳಿಗೆ ನೋವಾದಾಗ ಹೇಗೆ ನೋಡಿಕೊಳ್ಳಬೇಕು ? ಚರ್ಚಿಸು.
- ಪ್ರಾಣಿಗಳಿಗೆ ಪ್ರೀತಿ ಹೆಚ್ಚಾದಾಗ ಅವು ನಮಗೆ ಹೇಗೆ ನಡೆದುಕೊಳ್ಳುತ್ತವೆ? ವಿವರಿಸು.
- ಕುಳಿತಿರುವ / ಮಲಗಿರುವ ಪ್ರಾಣಿಗಳ ಮುಂದೆ ನಿಂತಾಗ ಅವು ಹೇಗೆ ವರ್ತಿಸುತ್ತವೆ? ವೀಕ್ಷಿಸು.
- ನಾಯಿ, ಕೋತಿ, ಬೆಕ್ಕುಗಳಿಗೆ ಕೋಪ ಬಂದರೆ ಹೇಗೆ ವರ್ತಿಸುತ್ತವೆ? ಯೋಚಿಸಿ ಹೇಳು.

10

## 10.3 ಯಾವುದು ಸರಿ? ಯಾವುದು ತಪ್ಪು?

3

**ಸೂಚನೆ :** ಸರಿಯಾದ ಚಿತ್ರಕ್ಕೆ (✓) ಎಂದು, ತಪ್ಪಾದ ಚಿತ್ರಕ್ಕೆ (X) ಗುರುತು ಹಾಕೋಣ.













@KTBS
NOT TO BE REPUBLISHED

* ನನಗೆ ಅರ್ಥವಾಗಿದೆ
* ನನಗೆ ಸಹಾಯ ಬೇಕಿದೆ

ಶಿಕ್ಷಕರ ಸಹಿ :
ದಿನಾಂಕ :

10

## 10.4 ಉಣಿಸು – ಪೋಷಿಸು




**ಸೂಚನೆ :** ಹೇಳಿಕೆಗಳನ್ನು ಓದೋಣ. ಇವುಗಳನ್ನು ನಾವೂ ಅನುಸರಿಸೋಣ.

| ಕ್ರ. ಸಂ. | ಹೇಳಿಕೆಗಳು |
|---|---|
| 1. | ಗಾಯವಾದ ಪ್ರಾಣಿ ಪಕ್ಷಿಗಳಿಗೆ ಹಿರಿಯರ ಜೊತೆ ಸೇರಿ ಆರೈಕೆ ಮಾಡುತ್ತೇನೆ. |
| 2. | ಪ್ರಾಣಿ ಪಕ್ಷಿಗಳಿಗೆ ಕುಡಿಯಲು ನೆರವಾಗುವಂತೆ ನೀರು ಸಂಗ್ರಹಿಸಿ ಇಡುತ್ತೇನೆ. |
| 3. | ಗಿಡಗಳನ್ನು ಚಿವುಟದಂತೆ, ಮೊಗ್ಗುಗಳನ್ನು ಕೀಳದಂತೆ ನೋಡಿಕೊಳ್ಳುತ್ತೇನೆ. |
| 4. | ತಡವರಿಸುವ ಹಿರಿಯರ ಕೈಹಿಡಿದು ನಡೆಸಲು ಸಹಾಯ ಮಾಡುತ್ತೇನೆ. |
| 5. | ರಜೆ ದಿನಗಳಲ್ಲಿ ಅಪ್ಪ ಅಮ್ಮನ ಕೆಲಸಗಳಿಗೆ ನೆರವಾಗುತ್ತೇನೆ. |
| 6. | ಉಡುಪು ಮತ್ತು ಶಾಲಾ ಸಾಮಗ್ರಿಗಳನ್ನು ಓರಣವಾಗಿ ಇಟ್ಟುಕೊಳ್ಳುತ್ತೇನೆ. |
| 7. | ಸಾಕು ಪ್ರಾಣಿಗಳ ಸ್ವಚ್ಛತೆಯ ಕೆಲಸಕ್ಕೆ ಹಿರಿಯರ ಜೊತೆ ನಾನು ಸಹಕರಿಸುತ್ತೇನೆ. |
| 8. | ರಸ್ತೆಯ ಮೇಲೆ ಜಾರುವ ವಸ್ತುಗಳು ಇದ್ದಲ್ಲಿ ಅದನ್ನು ದೂರಕ್ಕೆ ಸರಿಸುತ್ತೇನೆ. |
| 9. | ಪ್ರಾಣಿ ಪಕ್ಷಿಗಳಿಗೆ ಅಗತ್ಯವಿರುವ ಆಹಾರ ಪದಾರ್ಥಗಳನ್ನು ನೀಡಿ ಪೋಷಿಸುತ್ತೇನೆ. |
| 10. | ಪ್ರಾಣಿ ಪಕ್ಷಿಗಳ ಮರಿಯನ್ನು ಅಪಾಯದಿಂದ ರಕ್ಷಿಸಿ ಜೋಪಾನ ಮಾಡುತ್ತೇನೆ. |

@KTBS NOT TO BE REPUBLISHED

* ನನಗೆ ಅರ್ಥವಾಗಿದೆ ☐
* ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

10

## 10.5 ನಮ್ಮ ಸುತ್ತಲಿನ ಗಿಡಗಳು

3

**ಸೂಚನೆ :** ಚಿತ್ರದಲ್ಲಿ ಯಾವ ಯಾವ ರೀತಿಯ ಸಸ್ಯಗಳಿವೆ ಎಂಬುದನ್ನು ಗುರುತಿಸೋಣ.



1. ಯಾವುದಾದರೂ 5 ತರಕಾರಿ ಬಳ್ಳಿಗಳನ್ನು ಹೆಸರಿಸು.
2. ಯಾವುದಾದರೂ 5 ಹೂ ಬಿಡುವ ಸಸ್ಯಗಳನ್ನು ಹೆಸರಿಸು.
3. ನಿಮ್ಮ ಮನೆಯ ಸುತ್ತಮುತ್ತ ಯಾವ ಯಾವ ಸಸ್ಯಗಳಿವೆ ಎಂಬುದನ್ನು ವೀಕ್ಷಿಸಿ ಹೆಸರಿಸು.

| | |
|---|---|
| * ನನಗೆ ಅರ್ಥವಾಗಿದೆ | |
| * ನನಗೆ ಸಹಾಯ ಬೇಕಿದೆ | |

ಶಿಕ್ಷಕರ ಸಹಿ :
ದಿನಾಂಕ :

10

## 10.6 ನಮ್ಮ ನೆರವು ಹೀಗಿರಲಿ

3

**ಸೂಚನೆ :** ಸರಿಯಾದ ಅರ್ಥ ಬರುವ ಪದವನ್ನು ಆರಿಸಿ ಬಿಟ್ಟ ಸ್ಥಳದಲ್ಲಿ ಬರೆಯೋಣ.

| | | | |
|---|---|---|---|
| ದಾಟಲು | ಆರೈಕೆ | ನೀರು | ಕೈ ಹಿಡಿದು |
| ಓಡಾಡಲು | ಸಾಲಿನಲ್ಲಿ | ಪ್ರಾಣಿ ಪಕ್ಷಿ | ಪೋಲು |
| ಸಹಾಯ | ಸೀಟು | ಔಷಧಿ | ಹುಲ್ಲು |

1. ಗಾಯಗೊಂಡ ಪ್ರಾಣಿಗಳಿಗೆ ______________ ಹಚ್ಚುತ್ತೇನೆ.
2. ನಮ್ಮಂತೆ ______________ ಗಳು ವಾಸಿಸಲು ಜಾಗ ಮಾಡಿಕೊಡುತ್ತೇನೆ.
3. ಸಹಪಾಠಿಗೆ ಕಷ್ಟದ ಸಮಯದಲ್ಲಿ ______________ ಮಾಡುತ್ತೇನೆ.
4. ತಡವರಿಸುವ ಹಿರಿಯರಿಗೆ ______________ ನೆರವಾಗುತ್ತೇನೆ.
5. ದನ ಕರುಗಳ ಮೇವಿಗಾಗಿ ______________ ಹಾಕುತ್ತೇನೆ.
6. ಆಟವಾಡುವಾಗ ಸಹಪಾಠಿ ಕೆಳಗೆ ಬಿದ್ದರೆ ______________ ಎತ್ತುತ್ತೇನೆ.
7. ಕಣ್ಣು ಕಾಣದವರಿಗೆ ರಸ್ತೆ ______________ ಸಹಾಯ ಮಾಡುತ್ತೇನೆ.
8. ಬಸ್ಸಿನಲ್ಲಿ ನಿಂತಿರುವ ಹಿರಿಯರಿಗೆ ______________ ಬಿಟ್ಟು ಕೊಡುತ್ತೇನೆ.
9. ಪ್ರಾಣಿ ಪಕ್ಷಿಗಳಿಗೆ ಕುಡಿಯಲು ______________ ಇಡುತ್ತೇನೆ.
10. ಪ್ರಾಣಿಗಳಿಗೆ ನೋವಾದಾಗ ______________ ಮಾಡುತ್ತೇನೆ.
11. ಶಾಲಾ ಬಿಸಿಯೂಟದ ಸಮಯದಲ್ಲಿ ಸರದಿ ______________ ಕೂರುತ್ತೇನೆ.
12. ನೀರು ______________ ಆಗದಂತೆ ಎಚ್ಚರ ವಹಿಸುತ್ತೇನೆ.

@KTBS NOT TO BE REPUBLISHED

* ನನಗೆ ಅರ್ಥವಾಗಿದೆ ☐
* ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

# 10

## 10.7 ನನ್ನ ಕಲಿಕೆಯ ಸಾಧನೆ

3

**ಸೂಚನೆ :** ನಾನೆಷ್ಟು ಕಲಿತಿದ್ದೇನೆ ಎಂಬುದಕ್ಕೆ ಸ್ಟಾರ್ (✶) ನೀಡೋಣ.

1. ಈ ಪುಸ್ತಕದಲ್ಲಿನ ಎಲ್ಲಾ ಚಟುವಟಿಕೆಗಳನ್ನು ಶಿಕ್ಷಕರು / ಹಿರಿಯರ ಸಹಾಯದಿಂದ ಪೂರ್ಣಗೊಳಿಸಿರುತ್ತೇನೆ ಎಂದಾದಲ್ಲಿ, ನಿನಗೆ ನೀ ಕೊಡುವ ಸ್ಟಾರ್‌ಗಳು ________ .

2. ಯೋಜನೆಗಳ ಮಾಹಿತಿಯನ್ನು ಗೆಳೆಯರ ಸಹಾಯದಿಂದ ಸಂಗ್ರಹಿಸಿರುತ್ತೇನೆ ಮತ್ತು ತರಗತಿಯಲ್ಲಿ ಹಂಚಿಕೊಂಡಿರುತ್ತೇನೆ ಎಂದಾದಲ್ಲಿ, ನಿನಗೆ ನೀ ಕೊಡುವ ಸ್ಟಾರ್‌ಗಳು ________ .

3. ಆರೋಗ್ಯಕರ ಅಭ್ಯಾಸಗಳನ್ನು ರೂಢಿಸಿಕೊಳ್ಳುತ್ತೇನೆ ಮತ್ತು ಅದನ್ನು ನಿತ್ಯವೂ ಅನುಸರಿಸುತ್ತೇನೆ ಎಂದಾದಲ್ಲಿ, ನಿನಗೆ ನೀ ಕೊಡುವ ಸ್ಟಾರ್‌ಗಳು ________ .

4. ಪ್ರಾಣಿ–ಪಕ್ಷಿ ಹಾಗೂ ಸಸ್ಯಗಳ ಆರೈಕೆ ಮತ್ತು ಪೋಷಣೆಗೆ ನೆರವಾಗುವಂತೆ ನಡೆದುಕೊಳ್ಳುತ್ತೇನೆ ಎಂದಾದಲ್ಲಿ, ನಿನಗೆ ನೀ ಕೊಡುವ ಸ್ಟಾರ್‌ಗಳು ________ .

5. ವಿವಿಧ ರೀತಿಯ ಆಟಗಳಲ್ಲಿ ಭಾಗವಹಿಸುತ್ತೇನೆ ಮತ್ತು ಆಟಿಕೆಗಳನ್ನು ತಯಾರಿಸುತ್ತೇನೆ ಎಂದಾದಲ್ಲಿ ನಿನಗೆ ನೀ ಕೊಡುವ ಸ್ಟಾರ್‌ಗಳು ________ .

© KTBS NOT TO BE REPUBLISHED



# ಹವಾಮಾನ ನಕ್ಷೆ
## (ಕ್ರೋಡೀಕರಣ)

ದಿನಾಂಕ:______________

| ಕ್ರ. ಸಂ. | ತಿಂಗಳು | 1  | | 2  | | 3  | | 4  | | 5  | | 6  | |
|---|---|---|---|---|---|---|---|---|---|---|---|---|---|
| | | ಬೆಳಿಗ್ಗೆ | ಸಂಜೆ | ಬೆಳಿಗ್ಗೆ | ಸಂಜೆ | ಬೆಳಿಗ್ಗೆ | ಸಂಜೆ | ಬೆಳಿಗ್ಗೆ | ಸಂಜೆ | ಬೆಳಿಗ್ಗೆ | ಸಂಜೆ | ಬೆಳಿಗ್ಗೆ | ಸಂಜೆ |
| 1 | ಜೂನ್ | | | | | | | | | | | | |
| 2 | ಜುಲೈ | | | | | | | | | | | | |
| 3 | ಆಗಸ್ಟ್ | | | | | | | | | | | | |
| 4 | ಸೆಪ್ಟೆಂಬರ್ | | | | | | | | | | | | |
| 5 | ಅಕ್ಟೋಬರ್ | | | | | | | | | | | | |
| 6 | ನವೆಂಬರ್ | | | | | | | | | | | | |
| 7 | ಡಿಸೆಂಬರ್ | | | | | | | | | | | | |
| 8 | ಜನವರಿ | | | | | | | | | | | | |
| 9 | ಫೆಬ್ರವರಿ | | | | | | | | | | | | |
| 10 | ಮಾರ್ಚ್ | | | | | | | | | | | | |
| | | | | | | | | | | | | | |

@KTBS
NOT TO BE REPUBLISHED

**ಸುಗಮಕಾರರಿಗೆ ಸೂಚನೆ:** ಪ್ರತಿ ದಿನದ ಹವಾಮಾನ ನಕ್ಷೆಯನ್ನು ಗಮನಿಸಿ, ತಿಂಗಳುವಾರು ಕ್ರೋಡೀಕರಣ ಮಾಡುವುದು.

# ಮೌಲ್ಯಾಂಕನ – ಸೂಚಿತ ಕಲಿಕಾ ಫಲಗಳು

| ಕ್ರ.ಸಂ. | ಮೈಲಿಗಲ್ಲು | ಕಲಿಕಾ ಫಲಗಳು | ಮೌಲ್ಯಾಂಕನ ವಿಧ |
|---|---|---|---|
| 5 | ಆಟಗಳು ನಿಯಮಗಳು | • ಆಟದ ಸಮಯದಲ್ಲಿ ಇತರರ ಆಲೋಚನೆಗಳನ್ನು ಸೇರಿಸಲು ಇಚ್ಛೆಯನ್ನು ಪ್ರದರ್ಶಿಸುವರು.<br>• ಇತರರೊಂದಿಗೆ ಆಟ ಆಡುವಾಗ ನಿಯಮಗಳನ್ನು ಪಾಲಿಸುವರು.<br>• ನೈಜ ಪ್ರಪಂಚದಲ್ಲಿನ ಸನ್ನಿವೇಶಗಳನ್ನು ಸರಳ ಗಣಿತದ ಸಮಸ್ಯೆಗಳೆಂದು ಗುರುತಿಸುವರು. | ನವೆಂಬರ್–ಡಿಸೆಂಬರ್<br><br>ರೂ.ಮೌ – 03 |
| 6 | ನನ್ನ ಸುರಕ್ಷತೆ | • ರಸ್ತೆಯಲ್ಲಿ ನಡೆಯುವಾಗ, ಸೈಕಲ್ ಸವಾರಿ ಮಾಡುವಾಗ ಮತ್ತು ಸಾರ್ವಜನಿಕ ಸಾರಿಗೆ ಇತ್ಯಾದಿಗಳಲ್ಲಿ ಪ್ರಾಥಮಿಕ ಸುರಕ್ಷತಾ ನಿಯಮಗಳನ್ನು ಅನುಸರಿಸುವರು. | |
| 7 | ವೃತ್ತಿಗಳು | • ವಯಸ್ಕರರು ಮತ್ತು ಸಹಪಾಠಿಗಳ ಸಹಾಯವನ್ನು ಕೇಳಲು ಭಾಷೆಯನ್ನು ಬಳಸುವರು.<br>• ಪ್ರಾಥಮಿಕ ಸುರಕ್ಷತೆಯ ಕ್ರಮಗಳನ್ನು ಅರ್ಥಮಾಡಿಕೊಳ್ಳುವರು ಮತ್ತು ಅನುಸರಿಸುವರು.<br>• ಸಮಾಜಕ್ಕೆ ಕೊಡುಗೆ ನೀಡುವ ದೃಷ್ಟಿಯಿಂದ ತಮ್ಮ ಸಾಮರ್ಥ್ಯ ಮತ್ತು ಆಸಕ್ತಿಯನ್ನು ವ್ಯಕ್ತಪಡಿಸಲು ಆರಂಭಿಸುವರು. ದೊಡ್ಡವರಾದ ಮೇಲೆ ರೈತ, ವೈದ್ಯ, ಪೈಲೆಟ್, ಸೈನಿಕ, ಇತ್ಯಾದಿ ವೃತ್ತಿಗಳನ್ನು ಬಯಸುವರು.<br>• ಕುಟುಂಬದ ಸದಸ್ಯರುಗಳ ವೃತ್ತಿ ಮತ್ತು ಕೆಲಸ ಮಾಡುವ ಸ್ಥಳದ ಬಗೆಗಿನ ವಿವರಗಳನ್ನು ಹಂಚಿಕೊಳ್ಳುವರು. | ಜನವರಿ–ಫೆಬ್ರುವರಿ<br><br>ರೂ.ಮೌ – 04 |
| 8 | ನನ್ನ ಸಾಮರ್ಥ್ಯ | • ಜಿಗಿಯುವರು ಮತ್ತು ಆಟವನ್ನು ಪೂರ್ಣಗೊಳಿಸುವರು. ಸೂಕ್ತ ತಂತ್ರ ಮತ್ತು ಸಮತೋಲನದೊಂದಿಗೆ ಭಾರವಾದ ವಸ್ತುಗಳನ್ನು ಸಾಗಿಸುವರು. ವೇಗದೊಂದಿಗೆ ಉತ್ತಮ ದೈಹಿಕ ಸಮತೋಲನವನ್ನು ಪ್ರದರ್ಶಿಸುವರು.<br>• ತಾಡಾಸನ ಭಂಗಿಯಲ್ಲಿ ಒಂದು ನಿಮಿಷದವರೆಗೆ ಸ್ಥಿರವಾಗಿ ನಿಲ್ಲುವರು.<br>• ಕೆಲಸ ಹಾಗೂ ಆಟದ ಸನ್ನಿವೇಶಗಳಲ್ಲಿ ಸಾಮರ್ಥ್ಯ ಮತ್ತು ಸಹಿಷ್ಣುತೆಯನ್ನು ಪ್ರದರ್ಶಿಸುವರು. | |
| 9 | ಭಾವನೆ ವ್ಯಕ್ತ | • ಸಮಾಜ ಒಪ್ಪಿದ ರೀತಿಯಲ್ಲಿ ಭಾವನೆಗಳನ್ನು ವಿವರಿಸುವರು.[ಉದಾ: ಅಳುವುದನ್ನು ನಿಲ್ಲಿಸುವರು. ಅಳುವುದಕ್ಕೆ ಕಾರಣ ವಿವರಿಸುವರು.]<br>• ಇತರ ಮಕ್ಕಳ ಭಿನ್ನತೆಗಳನ್ನು ಗಮನಿಸುವರು ಮತ್ತು ಅಪಹಾಸ್ಯ ಮಾಡದಿರುವುದನ್ನು ರೂಢಿಸಿಕೊಳ್ಳುವರು. | ಮಾರ್ಚ್<br>ಸ.ಮೌ. – 2<br>(ಎಲ್ಲಾ ಕಲಿಕಾ ಫಲಗಳನ್ನು ಪರಿಗಣಿಸುವುದು) |
| 10 | ನನ್ನ ಕರ್ತವ್ಯ | ಇತರೆ ಜೀವಿಗಳ (ಪ್ರಾಣಿ, ಪಕ್ಷಿ, ಕೀಟ) ಜೊತೆ ವ್ಯವಹರಿಸುವಾಗ ಆರೈಕೆ ಮತ್ತು ಮೃದುತ್ವ ಭಾವನೆ ತೋರುವರು. | |

©KTBS NOT TO BE REPUBLISHED